<u>ಸಾಕ್ಷಿಯನ್ನು ದಿನಾಂಕ **24-02-2026** ರಂದು ಸತ್ಯಪ್ರಮಾಣ ಭೋಧಿಸಲಾಯಿತು.</u>

<u>**ಮುಂದುವರೆದ ಪಾಟಿ ಸವಾಲುಃ ಪ್ರತಿವಾದಿಯ ಪರ ಶ್ರೀ ಎನ್ ಎಲ್ ಪಿ ವಕೀಲರಿಂದಃ**</u>

ದಾವಾ ನಾನೇ ಹೇಳಿ ಬರೆಸಿದ್ದೇನೆ. ದಾವಾ ಆಸ್ತಿಯಲ್ಲಿ ಆರ್ ಸಿ ಸಿ ಮನೆ ಇರುತ್ತದೆ. ಆ ಆರ್ ಸಿ ಸಿ ಮನೆಯನ್ನು ನಾನೇ ಕಟ್ಟಿಸಿದ್ದೇನೆ. ನಾನು ಆರ್ ಸಿ ಸಿ ಮನೆ ಕಟ್ಟಿಸುವಾಗ ಮುನಿಸಿಪಾಲಿಟಿಯಿಂದ ಕಟ್ಟಡ ಪರವಾನಿಗೆಯನ್ನು ಪಡೆದುಕೊಂಡಿದ್ದೆನು. 42 ವರ್ಷದ ಹಿಂದೆಯೇ ಆ ಮನೆಯನ್ನು ಕಟ್ಟಿಸಿದ್ದೇನೆ. ಆ ಕಟ್ಟಡ ಪರವಾನಿಗೆ ಪತ್ರವನ್ನು ಮತ್ತು ನಕಾಶೆಯನ್ನು ನ್ಯಾಯಾಲಯಕ್ಕೆ ಹಾಜರುಮಾಡಿದ್ದೇನೋ ಇಲ್ಲವೋ ನೆನಪಿಲ್ಲ. ಆ ಕಟ್ಟಡ ಪರವಾನಿಗೆ ಪತ್ರವನ್ನು ನನ್ನ ಹೆಸರಿಗೆ ಪಡೆದಿದ್ದೆನು. ಆ ಕಟ್ಟಡ ಪರವಾನಿಗೆ ಪತ್ರ ನನ್ನ ಹೆಸರಿನಲ್ಲಿ ಇಲ್ಲ, ಅದು ಪ್ರತಿವಾದಿ ನಂಃ-1 ರವರ ಹೆಸರಿನಲ್ಲಿದೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ-1 ರವರ ಹೆಸರಿನಲ್ಲಿ ಕಟ್ಟಡ ಪರವಾನಿಗೆ ಪಡೆದು ಆ ಆರ್ ಸಿ ಸಿ ಮನೆಯನ್ನು ಕಟ್ಟಿಸಿದ್ದಾರೆ ಎಂದರೆ ಸರಿಯಲ್ಲ. ದಿಃ 27-03-1997 ರಂದು ಆ ಕಟ್ಟಡ ಪರವಾನಿಗೆಯನ್ನು 1 ನೇ ಪ್ರತಿವಾದಿ ಪಡೆದು ಕಟ್ಟಡ ಕಟ್ಟಿಸಿದ್ದಾನೆ ಎಂದರೆ ಸರಿಯಲ್ಲ. ಅದೇ ರೀತಿ ನಗರ ಯೋಜನಾ ಪ್ರಾಧಿಕಾರ, ಗಂಗಾವತಿಯಿಂದ ಪರವಾನಿಗೆ ಪಡೆದುಕೊಂಡು 1 ನೇ ಪ್ರತಿವಾದಿ ತನ್ನ ಹೆಸರಿಗೆ ಕಟ್ಟಿಸಿದ್ದಾನೆ ಎಂದರೆ ಸರಿಯಲ್ಲ. ಆ ಬಗ್ಗೆ ನಕಾಶೆಯೂ ಕೂಡಾ 1 ನೇ ಪ್ರತಿವಾದಿಯವರ ಹೆಸರಿನಲ್ಲಿ ಇದೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಆತ ಏನು ಮಾಡಿಕೊಂಡಿದ್ದಾನೋ ಇಲ್ಲವೋ ನನಗೆ ಗೊತ್ತಿಲ್ಲ, ನಾನು ಓದಿಲ್ಲ ಎಂದು ನುಡಿಯುತ್ತಾರೆ. ಆ ಪ್ರಕಾರ ನಗರಸಭೆಯವರು ಕಟ್ಟಡ ಪರವಾನಿಗೆ ಮತ್ತು ದಾವಾ ಆಸ್ತಿಯ ಅನುಮೋದಿತ ನಕಾಶೆಯನ್ನು 1 ನೇ ಪ್ರತಿವಾದಿಯ ಹೆಸರಿಗೆ ಕೊಟ್ಟಿದ್ದಾರೆ ಮತ್ತು ಆ ಬಗ್ಗೆ 1 ನೇ ಪ್ರತಿವಾದಿಯೇ ಅದಕ್ಕೆ ತಗಲುವ ಶುಲ್ಕವನ್ನು ಭರಿಸಿರುತ್ತಾರೆ ಎಂದರೆ ಸರಿಯಲ್ಲ. ಕಟ್ಟಡ ಪರವಾನಿಗೆ ಕೊಡುವ ಮುನ್ನ ನಗರಸಭೆಯವರು ಆಜುಬಾಜು ವ್ಯಕ್ತಿಗಳಿಗೆ ಮತ್ತು ನನಗೆ ಕೂಡಾ ನೊಟೀಸನ್ನು ಜ್ಯಾರಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಆ ಬಗ್ಗೆ ನನಗೆ ನಗರಸಭೆಯವರು ನೊಟೀಸು ಜ್ಯಾರಿ ಮಾಡಿದ್ದರೂ, ಅದನ್ನು ನಾನು ಸ್ವೀಕರಿಸಿ ತದನಂತರ ಆ ಬಗ್ಗೆ ಯಾವುದೇ ತಕರಾರು ಸಲ್ಲಿಸಿಲ್ಲ,

ಆದರೂ ನಾನು ಆ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು 40 ವರ್ಷಗಳಾದರೂ ಆ ಬಗ್ಗೆ ಯಾವುದೇ ಚಕಾರ ಎತ್ತಿಲ್ಲ, ಆ ದಾವಾ ಸ್ವತ್ತು 1 ನೇ ಪ್ರತಿವಾದಿಯ ಸ್ವತ್ತಾಗಿರುತ್ತದೆ, ಆದ್ದರಿಂದ ನಾನು ಯಾವುದೇ ಆಕ್ಷೇಪಣೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಈ ದಾವಾ ಸ್ವತ್ತು ಹೊರತುಪಡಿಸಿ, ಇನ್ನೂ 4 ಆಸ್ತಿಗಳು 1 ಮತ್ತು 2 ನೇ ಪ್ರತಿವಾದಿಯರು ಜೊತೆಯಾಗಿಯೇ ಖರೀದಿಸಿದ ಆಸ್ತಿಗಳಾಗಿರುತ್ತವೆ ಮತ್ತು ಆ ಆಸ್ತಿಗಳಿಗೆ ಅವರು ಸಹಮಾಲೀಕರಾಗಿರುತ್ತಾರೆ, ಆದ ಕಾರಣ 1 ನೇ ಪ್ರತಿವಾದಿ ಮತ್ತು 2 ನೇ ಪ್ರತಿವಾದಿಯರ ಕುಟುಂಬದ ಆಸ್ತಿಯ ಬಗ್ಗೆ ಜ್ಞಾಪನಾ ವಿಭಾಗ ಪತ್ರವನ್ನು ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಆ ಜ್ಞಾಪನಾ ಪತ್ರಕ್ಕೆ ನಾನೂ ಕೂಡಾ ಹೆಬ್ಬೆಟ್ಟಿನ ಗುರುತು ಹಾಕಿದ್ದೇನೆ ಹಾಗೂ ನಮ್ಮ ಯಜಮಾನರಾದ 2 ನೇ ಪ್ರತಿವಾದಿ ಸಹಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಅದರಂತೆ 1 ನೇ ಪ್ರತಿವಾದಿ ಮತ್ತು ಅವರ ಹೆಂಡತಿ ಅದಕ್ಕೆ ಸಹಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಆ ಜ್ಞಾಪನ ಪತ್ರಕ್ಕೆ ನನ್ನ ಮತ್ತು ನನ್ನ ಯಜಮಾನರ ಸಮ್ಮತಿ ಇತ್ತು ಆದ್ದರಿಂದ ನಾವು ಇಲ್ಲಿಯವರೆಗೂ ಚಕಾರ ಎತ್ತಿಲ್ಲ ಅದಕ್ಕೆ ಸಮ್ಮತಿ ಸೂಚಿಸಿದ್ದೇವೆ ಎಂದರೆ ಸರಿಯಲ್ಲ. ಆ ಜ್ಞಾಪನ ಪತ್ರದ ಪ್ರಕಾರ ದಾವ ಆಸ್ತಿಯ ಸ್ವತ್ತು 1 ನೇ ಪ್ರತಿವಾದಿ ಭಾಗಕ್ಕೆ ಹೋಗಿದೆ ಕಾರಣ ನಮಗೆ ದಾವಾ ಸ್ವತ್ತಿನಲ್ಲಿ ಯಾವುದೇ ಹಕ್ಕು, ಅಧಿಕಾರ, ಮಾಲಿಕತ್ವ ಇಲ್ಲ ಎಂದರೆ ಸರಿಯಲ್ಲ. ಈ ದಾವೆ ಹಾಕುವುದಕ್ಕಿಂತ ಮೊದಲೇ ಜ್ಞಾಪನಾ ವಿಭಾಗ ಪತ್ರದ ಬಗ್ಗೆ ಗೊತ್ತಿತ್ತು ಎಂದರೆ ಸರಿಯಲ್ಲ. ದಾವೆಯಲ್ಲಿ ಬರೆದ ವಿಷಯವನ್ನು ನಮ್ಮ ವಕೀಲರು ಕನ್ನಡದಲ್ಲಿ ಓದಿ ಹೇಳಿದ್ದಾರೆ. ವಾದ ಪತ್ರದ ಪ್ಯಾರಾ ನಂ-5 ರಲ್ಲಿ ದಿಃ 10-04-1991 ರಂದು ವಿಭಾಗ ಪತ್ರವನ್ನು ಸೃಷ್ಠಿ ಮಾಡಿದ್ದಾರೆ ಅಂತ ಬರೆಸಿದ್ದೀರಿ, ಆದ್ದರಿಂದ ಆ ಜ್ಞಾಪನಾ ವಿಭಾಗ ಪತ್ರ ವಿಷಯದ ಬಗ್ಗೆ ನನಗೆ ಮೊದಲೇ ಗೊತ್ತಿತ್ತು ಎಂದರೆ ಸರಿಯಲ್ಲ. ಗೊತ್ತಾದ ನಂತರ ಇಂದಿನವರೆಗೂ 1 ನೇ ಪ್ರತಿವಾದಿಯ ಮೇಲೆ ಯಾವ ಕಾನೂನು ಕ್ರಮ ಕೈಗೊಂಡಿದ್ದೀರಿ ಎನ್ನುವ ಪ್ರಶ್ನೆಗೆ ಸಾಕ್ಷಿಯು ಸುಮಾರು ಬಾರಿ ಕೇಳಿಕೊಂಡೆನು, ನಿನಗೆ ಗಂಡ ಮಕ್ಕಳು ಇಲ್ಲ, ನಿನಗೆ ಆಸ್ತಿ ಯಾಕೆ ಬೇಕು ಎಂದು ಹೇಳಿದ್ದಾನೆ ಎಂದು ನುಡಿಯುತ್ತಾರೆ. ಆ ರೀತಿ ಸುಳ್ಳು ಜ್ಞಾಪನಾ ವಿಭಾಗ ಪತ್ರ ಸೃಷ್ಠಿಸಿದ್ದಾನೆ ಎಂದು ನಾನು ಈ ದಾವೆಯನ್ನು ನ್ಯಾಯಾಲಯದಲ್ಲಿ ಹಾಕಿದ್ದೇನೆ. ನನ್ನ ಈ ದಾವೆಯಲ್ಲಿ ಜ್ಞಾಪನಾ ವಿಭಾಗ ಪತ್ರವನ್ನು ರದ್ದು ಮಾಡಬೇಕೆಂದು ಪರಿಹಾರವನ್ನು ಕೇಳಿಲ್ಲ. ಆ

ದಾವಾ ಆಸ್ತಿ 1 ನೇ ಪ್ರತಿವಾದಿಯ ಪಾಲಿಗೆ ಬಂದಿದ್ದರಿಂದ ನಾನು ಇಲ್ಲಿಯವರೆಗೂ ಆ ಜ್ಞಾಪನಾ ವಿಭಾಗ ಪತ್ರವನ್ನು ಪ್ರಶ್ನಿಸಿ ಕಾನೂನು ಕ್ರಮ ಕೈಗೊಂಡಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಅಂದಿನ ಮಾರುಕಟ್ಟೆಯ ಬೆಲೆಯನ್ನು ನಮ್ಮ ದಾವಾ ಪತ್ರದಲ್ಲಿ ತೋರಿಸಿಲ್ಲ ಎನ್ನುವ ಪ್ರಶ್ನೆಗೆ ಸಾಕ್ಷಿಯು ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಪತ್ರದಲ್ಲಿ ನಾವು ಬೇಕಂತಲೇ ದಾವಾ ಸ್ವತ್ತಿನ ಮಾರುಕಟ್ಟೆಯ ಬೆಲೆಯನ್ನು ತೋರಿಸಿಲ್ಲ ಎಂದರೆ ಸರಿಯಲ್ಲ. 2005-06 ನೇ ಸಾಲಿನಲ್ಲಿ ದಾವಾ ಸ್ವತ್ತಿನ ಮರುಕಟ್ಟೆಯ ಬೆಲೆ ಪ್ರತೀ ಚ. ಅಡಿಗೆ 100 ರೂಪಾಯಿ ಇತ್ತು, ಅದರ ಬಗ್ಗೆ ಉಪನೊಂದಣಾಧಿಕಾರಿ ಕಛೇರಿಯವರು ಮೌಲ್ಯದ ಬಗ್ಗೆ ದಾಖಲಾತಿ ಕೊಟ್ಟಿದ್ದಾರೆ ಎನ್ನುವುದು ಗೊತ್ತಿಲ್ಲ. ಆ ಮಾರುಕಟ್ಟೆಯ ಬೆಲೆಯಂತೆ ದಾವಾ ವಿಚಾರಣೆ ಮಾಡುವ ಅಧಿಕಾರ ವ್ಯಾಪ್ತಿ ಈ ನ್ಯಾಯಾಲಯಕ್ಕೆ ಇಲ್ಲ, ಅದು ಬೇರೆ ನ್ಯಾಯಾಲಯಕ್ಕೆ ಇರುತ್ತದೆ ಎಂದರೆ ಸರಿಯಲ್ಲ. ಅದಕ್ಕೋಸ್ಕರ ನಮ್ಮ ವಾದ ಪತ್ರದಲ್ಲಿ ಮಾರುಕಟ್ಟೆಯ ಬೆಲೆಯನ್ನು ನಮೂದಿಸಿಲ್ಲ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟಿ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯು ಹೇಳಿದ್ದನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ. ಹೆ. ಕೇ. ಸರಿ ಇದೆ, ಎಂದು ಒಪ್ಪಿರುತ್ತಾರೆ.

(ಜಿ. ಬಿ. ಹಳ್ಳಾಕಾಯಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಗಂಗಾವತಿ.